ಎಲ್ಲಾ ಸಾಕು ಮಾಡು. ನನ್ನ ವಿಷ್ಯಕ್ಕೆ ತಲೆ ಹಾಕಿದ್ರೆ. ನಿನ್ನ ಕಥೆ ಏನು ಮಾಡ್ತೀನಿ ಗೊತ್ತಾ?' ಅವನು ಅವಳತ್ತ ದೀರ್ಘವಾಗಿ ನೋಡುತ್ತಾ ಎರಡು ಹೆಜ್ಜೆಗಳನ್ನು ಮುಂದಿರಿಸಿದಾಗ, ಅಪೂರ್ವಳಿಗೆ ಜೀವವೇ ಬಾಯಿಗೆ ಬಂದಂತಾಗಿತ್ತು. ಅವಳು ಅಧೀರಳಾಗಿ ಹಿಂದೆ ಸರಿದಳು. 'ಅಪೂರ್ವ' ವಸುಮತಿ ಕೂಗುತ್ತಾ ಬಂದಾಗ ಸೂರ್ಯನ ಹೆಜ್ಜೆಗಳು ತಟಸ್ಥಗೊಂಡವು. ವಸುಮತಿ ಅವಳನ್ನು ಸಮೀಪಿಸುವುದರೊಳಗೆ ಸೂರ್ಯ ಅಲ್ಲಿಂದ ನಿರ್ಗಮಿಸಿದ್ದಾಗಿತ್ತು. ಅವಳು ನಿರಾಳವಾಗಿ ಉಸಿರಾಡಿದರೂ, ಕಣ್ಮುಂದೆ ಸೂರ್ಯನ ಆ ಕೆಂಪೇರಿದ ವ್ಯಗ್ರ ಮುಖ, ಹುಲುಸಾಗಿ ಬೆಳೆದ ಗಡ್ಡ, ರೋಷವನ್ನೇ ಸದಾ ಸ್ಫುರಿಸುವ ಚೂಪು ಕಂಗಳು.. ಸುಳಿದಾಗ ಅಪೂರ್ವ ಕಂಪಿಸಿದಳು. ಅವನಿಂದ ದೂರವೇ ಇರಬೇಕು ಎನಿಸಿ ಬಿಟ್ಟಿತು. ಮರುದಿನ ಆದರ್ಶನೇ ಮುತುವರ್ಜಿ ವಹಿಸಿ ಆಸ್ಪತ್ರೆಯಿಂದ ರಾಯರನ್ನು ಡಿಸ್ಚಾರ್ಜ್ ಮಾಡಿಸಿ, ಮನೆಗೆ ಕರೆತಂದ. ಅಪೂರ್ವ ರಾಯರ ಕೋಣೆಯನ್ನು ಶುಚಿಗೊಳಿಸಿ ಎಲ್ಲಾ ಅನುವು ಮಾಡಿಟ್ಟಿದ್ದಳು. ಅವರು ನಿಯಮಿತವಾಗಿ ಸೇವಿಸಬೇಕಾದ ಔಷಧಿಗಳು, ಆಹಾರದಲ್ಲಿಡ ಬೇಕಾದ ನಿಯಂತ್ರಣವನ್ನು ಆದರ್ಶ ಅಪೂರ್ವಳಿಗೆ ವಿವರಿಸಿ ಹೊರಟು ನಿಂತ. ವಿಜಯಮ್ಮ ಆಗಲೇ ಸೂರ್ಯನ ಜೊತೆ ಮಾತನಾಡುವಲ್ಲಿ ಮೈಮರೆತಿದ್ದರು. ಆದರ್ಶ ಅವರಿಗೆ ತಿಳಿಸಲು ಬಂದಾಗ,'ಆದರ್ಶ ನನ್ನ ಇನ್ನೊಂದು ಕೆಲಸ ಮಾಡ್ಬೇಕಪ್ಪಾ ನೀನು.. ಇಲ್ಲಾ ಅನ್ಬಾರ್ದು' ಎಂದರು.

'ಪರ್ವಾಗಿಲ್ಲ ಅತ್ತೆ.. ಹೇಳಿ' ಎಂದ ಆದರ್ಶ.

'ಈ ಸೂರ್ಯನನ್ನು ಸೆಲೂನ್‌ಗೆ ಕರೆದೊಯ್ದು ನೀಟಾಗಿ ಕಟ್ಟಿಂಗ್ ಮಾಡಿಸ್ಬೇಕು.. ಗಡ್ಡ ತೆಗೀಬೇಕು.. ಅವ್ನಿಗೆ ಒಳ್ಳೇ ಬಟ್ಟೆ ಬರೆ ಕೊಡಿಸ್ಬೇಕು.. ನೋಡು, ಹೇಗೆ ಒಡ್ಡನ ತರಹ ಕಾಣಿಸ್ತಾನೆ. ನಿನ್ನ ಹಾಗೆ ಇವ್ನು ಚೆನ್ನಾಗಿ ಕಾಣಿಸೋ ಹಾಗೆ ಮಾಡಿ ಕರ್ಕೊಂಡು ಬಾರಪ್ಪಾ! ಬೇಜಾರು ಮಾಡ್ಕೋ ಬೇಡಾ.. ನೀನೇ ನಮ್ಗೆ ಸದ್ಯಕ್ಕೆ ಆಪತ್ಬಾಂಧವ. ಅಪೂರ್ವನ್ನ ಇದಕ್ಕೆಲ್ಲ ಕಳಿಸಲು ಆಗಲ್ಲ.. ನನ್ಗೆ ತಿಳ್ಯೋದಿಲ್ಲ. ಅದಕ್ಕೆ ಹೇಳ್ತಾ ಇದ್ದೀನಿ.'

ಸೂರ್ಯ ತಲೆ ಕೊಡವಿದ. 'ನನ್ಗೆ ಅದೆಲ್ಲಾ ಬೇಡ.. ಬಿಟ್ಬಿಡಿ ನನ್ನ.. ನನ್ಗೆ ಹೇಗೆ ಬೇಕೋ ಹಾಗಿರ್ತೀನಿ.'

'ನೀನು ಹೀಗಿದ್ರೆ ನಿನ್ನ ಯಾರೂ ಇಷ್ಟಪಡಲ್ಲ ಸೂರ್ಯ.. ನನ್ನ ಮಾತು ಕೇಳು. ಅವ್ನ ಜೊತೆ ಹೋಗಿ ಬಾ.' ವಿಜಯಮ್ಮನ ಆಗ್ರಹಕ್ಕೆ ಸೂರ್ಯ ಮಣಿಯಲೇ ಬೇಕಾಯಿತು. ಒಳ ಹೋಗಿ ಆದರ್ಶನ ಕೈಗೆ ಹಣದ ಕಂತೆ ತಂದಿತ್ತರು.

'ಖರ್ಚಿನ ಮುಖ ನೋಡ್ಬೇಡ.. ಸೂರ್ಯ ಚೆನ್ನಾಗಿ ಕಾಣ್ಬೇಕು.. ಅಷ್ಟೇ..' ಎಂದರು. ಮನಸ್ಸಿಲ್ಲದ ಮನಸ್ಸಿನಿಂದ ಆದರ್ಶ ಸೂರ್ಯನೊಂದಿಗೆ ಹೆಜ್ಜೆ ಹಾಕಿದ.

ರಾಯರು ಕೋಣೆ ಬಿಟ್ಟು ಹೊರ ಬಂದಿರಲಿಲ್ಲ. ಮನೆಯಲ್ಲಿದ್ದ ಶಂಕರ, ನಾಲ್ಕೈದು ಬಾರಿ, ಅವರ ಕೋಣೆಯತ್ತ ಸುಳಿದಾಗ, ಅವರೊಂದಿಗೆ ಮಾತನಾಡಲು ವಿಜಯಮ್ಮ ಅನುವು ಮಾಡಿ ಕೊಡಲಿಲ್ಲ.

'ಅವ್ರಿಗೆ ತೊಂದ್ರೆ ಕೊಡ್ಬೇಡಿ.. ಮಕ್ಳನ್ನ ಕರ್ಕೊಂಡು ನೀವು ಅಂಗಳದಲ್ಲಿರಿ. ಸದ್ದು ಗದ್ದಲ ಮಾಡ್ಬೇಡಿ..' ಎಂದು ದೂರವೇ ಇರಿಸಿದ್ದರು. ಸಂಜೆಯಾಗುತ್ತಲೇ ಶಂಕರ, ವಸುಮತಿ ಮಕ್ಕಳೊಂದಿಗೆ ಊರಿಗೆ ಹೊರಟು ನಿಂತರು. ವಿಜಯಮ್ಮ ಶಂಕರನ ಕೈಗೆ ಒಂದಿಷ್ಟು ಹಣ ತುರುಕಿಸಿದಾಗ ಶಂಕರನ ಮುಖ ಪ್ರಸನ್ನಗೊಂಡಿತು.

'ಮಕ್ಳಿಗೆ ಏನಾದರೂ ಕೊಡಿಸಪ್ಪಾ' ಎಂದರು. ಅವರೆಲ್ಲಾ ನಿರ್ಗಮಿಸಿದ ಬಳಿಕ, 'ಈಗ ಮನೆ ಶಾಂತವಾಯಿತು ನೋಡು' ಎಂದು ನಿಟ್ಟುಸಿರಿಸಿಟ್ಟರು ವಿಜಯಮ್ಮ.

ಆದರ್ಶನೊಂದಿಗೆ ಒಂದು ಹೊರೆ ಬಟ್ಟೆ ಬರೆಗಳೊಂದಿಗೆ ಬಂದ ಸೂರ್ಯ, ಗುರುತೇ ಹಿಡಿಯಲಾಗದಷ್ಟು ಮಾರ್ಪಾಡು ಹೊಂದಿದ್ದ. ಮುಖದ ಮೇಲಿನ ಗಡ್ಡ ಮರೆಯಾಗಿತ್ತು. ಹುಲುಸಾಗಿ ಬೆಳೆದ ಕೂದಲು ಗಿಡ್ಡವಾಗಿ, ಒಪ್ಪವಾದ ಕ್ರಾಪು ಬಂದಿತ್ತು. ಅಂದವಾದ ನೀಲಿ ಬಣ್ಣದ ಟೀ ಶರ್ಟ್, ಕಪ್ಪು ಜೀನ್ಸ್‌ನಲ್ಲಿ ಸೂರ್ಯ ಲಕ್ಷಣವಾಗಿ ಕಾಣುತ್ತಿದ್ದ.

'ಎಷ್ಟು ಚೆನ್ನಾಗಿ ಕಾಣ್ತೀಯಪ್ಪಾ, ನನ್ನ ಕಣ್ಣೇ ನಿನ್ಗೆ ತಗಲುತ್ತೆ..' ವಿಜಯಮ್ಮ ಬಂದು ಅವನ ಕೆನ್ನೆ ಸವರಿ ನೆಟಿಕೆ ಮುರಿದರು. ಅಪೂರ್ವ ಕಣ್ಣರಳಿಸಿ ಹೊಸ ವ್ಯಕ್ತಿಯನ್ನು ಕಾಣುವಂತೆ ಸೂರ್ಯನನ್ನೇ ನೋಡುತ್ತಿದ್ದಳು. ಬದಲಾದ ರೂಪದಲ್ಲಿದ್ದ ಸೂರ್ಯನನ್ನು ಕಂಡು ಅವಳಿಗೆ ಬೆರಗಾಗಿತ್ತು. ಸೂರ್ಯನಿಗೆ ಬೇಕಾದ ಎಲ್ಲಾ ಅತ್ಯಗತ್ಯ ವಸ್ತುಗಳನ್ನು ಆದರ್ಶ ಖರೀದಿಸಿ ತಂದಿದ್ದ. ಉಳಿದ ಹಣವನ್ನು ಹಿಂದಿರುಗಿಸಿ ಇಬ್ಬರಿಗೂ ತಿಳಿಸಿ ಅವನು ಹೊರಟು ನಿಂತ. ವಿಜಯಮ್ಮ ಸೂರ್ಯನ ಜೊತೆ ಅವನ ಬಟ್ಟೆ ಬರೆಗಳನ್ನು ತೆಗೆದಿರಿಸಲು ಹೋದಾಗ ಅಪೂರ್ವ ಒಬ್ಬಳೇ ಉಳಿದಿರುವುದನ್ನು ಕಂಡು ಆದರ್ಶ ಅವಳನ್ನು ಸಮೀಪಿಸಿದ.

'ಇನ್ಯಾವಾಗ ನಮ್ಮ ಭೇಟಿ..?' ಅವನ ಪ್ರಶ್ನೆಗೆ ಅಪೂರ್ವಳಲ್ಲಿ ಉತ್ತರವಿರಲಿಲ್ಲ. ಕಣ್ಣರಳಿಸಿ ಅವನತ್ತ ನೋಡಿದಳು.

'ನನ್ನ ಫೋನ್ ನಂಬರ್ ಡಿಲೀಟ್ ಮಾಡ್ಬೇಡಿ... ಆಗಾಗ ಕರೆ ಮಾಡ್ತಾ ಇರಿ' ಎಂದ ಅವಳನ್ನೇ ದೀರ್ಘವಾಗಿ ನೋಡುತ್ತಾ. ಅವಳಿಂದ ದೂರ ಸರಿಯಲು ಇಚ್ಛಿಸದವನಂತೆ, 'ನಾನು ಕರೆ ಮಾಡಬಹುದಲ್ವಾ? ಎನಿವೇ.. ನಾವೀಗ ಫ್ರೆಂಡ್ಸ್ ಅಲ್ವಾ?'

'ಖಂಡಿತಾ.. ನಿಮ್ಮಿಂದ ತುಂಬಾ ಉಪಕಾರವಾಗಿದೆ ಆದರ್ಶ.. ನಿಮ್ಮ ಸಹಕಾರ ನಾನು ಮರೆಯಕ್ಕೇ ಆಗಲ್ಲ' ಅವಳು ಅಷ್ಟು ಹೇಳಿದ್ದನ್ನು ಆಲಿಸಿ ಸಂಭ್ರಮ ಪಟ್ಟ.

'ಏನೇ ಬೇಕಾದ್ರೂ ಕರೆ ಮಾಡಿ. ನಿಮಗೋಸ್ಕರ ನಾನು ಹಾಜರಾಗ್ತೀನಿ.. ಸರೀನಾ?' ಆದರ್ಶ ಒಲ್ಲದ ಮನದಿಂದಲೇ ಅಲ್ಲಿಂದ ಹೊರಟ.

ಮತ್ತೆ ಹಳೆಯ ದಿನಚರಿ ಆರಂಭಗೊಂಡಿತ್ತು. ಸೂರ್ಯ ಮಾತ್ರ ಆ ಮನೆಗೆ ಹೊಸ ಸೇರ್ಪಡೆ. ಅಪೂರ್ವ ಅವನ ಮುಂದೆ ಸುಳಿದಾಡುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದಳು. ವಿಜಯಮ್ಮ ಮಗ ಮರಳಿ ದೊರಕಿದನೆಂಬ ಹಿಗ್ಗಿಗೆ ಅವನನ್ನು ಸದಾ ಮುಂದಿರಿಸಿಕೊಂಡು ಮಾತನಾಡುತ್ತ ಮೈಮರೆಯುತ್ತಿದ್ದರು. ಎಳೆಯ ಮಗುವಿನಂತೆ ಅವನನ್ನು ಮುದ್ದಿಸುವುದು. ಅವನೂ ಎಳೆ ಮಗುವಿನಂತೆ ಸಿಟ್ಟು ಮಾಡಿಕೊಳ್ಳುವುದು. ಇಷ್ಟು ಸುದೀರ್ಘ ವರ್ಷಗಳಲ್ಲಿ ಕಳೆದುಕೊಂಡ ಆ ವಾತ್ಸಲ್ಯವನ್ನು ಪರಸ್ಪರ ಧಾರೆಯೆರೆಯುತ್ತಿದ್ದರು. ಸೂರ್ಯನನ್ನು ವಿಜಯಮ್ಮ ಹೊರಗೆ ಹೋಗಲೂ ಬಿಡುತ್ತಿರಲಿಲ್ಲ.

'ನಿನ್ಗೇನು ಬೇಕು ಹೇಳು? ನಾನು ತರಿಸಿಕೊಡ್ತೀನಿ. ನೀನು ಹೊರಗೆ ಹೋಗ ಕೂಡದು' ಎಂದು ತಾಕೀತು ಮಾಡುತ್ತಿದ್ದರು. ಈ ರೀತಿಯ ಅತಿರೇಕದ ಕಳಕಳಿ ಮಾತ್ರ ಸೂರ್ಯನಿಗೆ ಮೂಗುಬ್ಬಸವಾಗಿತ್ತು.

'ಯಾಕಮ್ಮಾ.. ನನ್ನನ್ನು ಹೊರಗಡೆ ಹೋಗಲೂ ನೀನು ಬಿಡೋದಿಲ್ಲ..?'

'ನೀನು ಹೋಗಿ ವಾಪಾಸು ಬರದಿದ್ದರೆ.. ಮತ್ತೆ ಆ ರೌಡಿ ಗೋಪಿ ಗುಂಪಿನ ಜೊತೆ ಸೇರಿಕೊಂಡರೆ.. ಮತ್ತೆ ನೀನು ತಪ್ಪು ದಾರಿಗಿಳಿದರೆ ಏನು ಗತಿ? ಒಂದ್ಸಲ ನಿನ್ನನ್ನು ಕಳ್ಕೊಂಡು ಮತ್ತೆ ಪಡೆದಿದ್ದೇನೆ. ಪುನ ಕಳೆದುಕೊಳ್ಳಲಾರೆ. ನಮ್ಗಿರೋನು.. ನೀನೊಬ್ನೆ.. ಯಾವ ಕಾರಣಕ್ಕೂ ಮತ್ತೆ ನಿನ್ನನ್ನು ದೂರ ಮಾಡಿಕೊಳ್ಳಲಾರೆ..' ವಿಜಯಮ್ಮನ ದನಿ ಗದ್ಗದಗೊಳ್ಳುತ್ತಿತ್ತು.

'ಅಮ್ಮಾ ನಿಜವಾಗಲೂ ನಾನು ನಿಮ್ಮನ್ನು ಬಿಟ್ಟು ದೂರ ಹೋಗೋಲ್ಲ.. ನನ್ನನ್ನು ನಂಬು.. ಎಷ್ಟು ದಿನಾಂತ ಹೀಗೆ ಮನೆಯೊಳಗೆ ಕೂತಿರಲಿ ನಾನು? ನನ್ಗೂ ಹೊರಗಡೆ ಸುತ್ತಾಡಿ ಬರಬೇಕು ಅನ್ನಲ್ವಾ..? ಮನೆಯೊಳಗೆ ನನ್ಗೆ ಉಸಿರುಗಟ್ಟಿದ ಹಾಗಾಗ್ತಿದೆ... ಇಷ್ಟು ದಿನ ನಾನು ಜೈಲಲಿದ್ದು ಬಂದಿದ್ದೀನಿ. ಈ ಮನೇನೂ ನೀನು ನನ್ಗೆ ಜೈಲು ಮಾಡ್ಬೇಡಾ..! ನನ್ನನ್ನು ನನ್ನ ಪಾಡಿಗಿರಲು ಬಿಡು..' ಕಡೆಗೆ ತಡೆಯಲಾರದೇ ಸೂರ್ಯ ಖಾರವಾಗಿ ಪ್ರತಿಕ್ರಿಯಿಸಿದಾಗ ವಿಜಯಮ್ಮ ಪೆಚ್ಚಾಗಿದ್ದರು. ತಾನು ಅತಿರೇಕವಾಗಿ ಮಾತನಾಡಿದೆ ಎನಿಸಿ ಕಡೆಗೆ ಸೂರ್ಯನೇ ಆಕೆಯನ್ನು ಸಂತೈಸಿದ್ದ.

'ನನ್ಹತ್ರ ಮೊಬೈಲ್ ಇದೆ. ನೀನು ಆಗಾಗ ಕರೆ ಮಾಡಿ ನನ್ನ ಮಾತನಾಡಿಸ ಬಹುದು. ನಾನು ನಿಮ್ಮನ್ನು ಬಿಟ್ಟು ಎಲ್ಲೂ ಹೋಗೋಲ್ಲ.. ಪ್ರತಿದಿನ ತಪ್ಪದೇ ಮನೇಗೇ ಬರ್ತೀನಿ..' ಎಂದು ಆಣೆ ಮಾಡಿದ ಬಳಿಕವೇ ವಿಜಯಮ್ಮ ಅವನನ್ನು ಮನೆಯಿಂದಾಚೆ ಕಾಲಿಡಲು ಅನುಮತಿ ನೀಡಿದ್ದರು. ಸೂರ್ಯ ಕೊಟ್ಟ ಮಾತಿನಂತೆ ತಪ್ಪದೇ ನಡೆದುಕೊಳ್ಳತೊಡಗಿದ ಬಳಿಕ ವಿಜಯಮ್ಮ ನಿರುಮ್ಮಳರಾಗಿದ್ದರು. ಮಗ ಮನೆಗೆ ಬಂದ ಬಳಿಕ ಅಪೂರ್ವಳ ಕಡೆಗಿನ ಅವರ ಕಾಳಜಿ ಕ್ಷೀಣಿಸಿತ್ತು.

'ನೀನು ತಿಂದೆಯಾ.. ನಿನ್ಗೇನು ಬೇಕೋ ಬಡಿಸಿಕೊಂಡು ತಿನ್ನು..' ಎಂದು ಬಿಡುತ್ತಿದ್ದರು. ಮೊದಲಿನ ಆದರ, ಅಕ್ಕರೆ ಎಲ್ಲವೂ ಸೂರ್ಯನ ಪಾಲಾಗಿತ್ತು. ಕೆಲವೊಮ್ಮೆ ಅಪೂರ್ವಳಿಗೆ ಸ್ವತಃ ಹೋಗಿ ತೆಗೆದುಕೊಳ್ಳಲು ಜೀವ